**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.**

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹೊಸದುರ್ಗ.

**ದಿನಾಂಕ 18 ನೇ ಜೂನ್ 2026**

**ಅಸಲು ದಾವೆ ಸಂಖ್ಯೆಃ 88/2026**

ವಾದಿ -

ಹೆಚ್.ಎನ್. ಶಿವಮೂರ್ತಿ

ವಿರುದ್ಧ

ಪ್ರತಿವಾದಿ-

ಹೆಚ್.ಎನ್. ವೀರಭದ್ರಪ್ಪ
ಮೃತಪಟ್ಟಿದ್ದು ಅವನ ವಾರಸುದಾರರು

**ಮಧ್ಯಂತರ ಅರ್ಜಿ ಸಂಖ್ಯೆ-8**

ಅರ್ಜಿದಾರ /ಉದ್ದೇಶಿತ 2 ನೇ ಪ್ರತಿವಾದಿ -

ಹೆಚ್.ಎಂ ರುದ್ರುಕುಮಾರ್ ,
ತಂದೆ ಲೇಟ್ ಡಿ. ಮಹೇಶ್ವರಪ್ಪ,
ವಾಸಃ ಟಿ.ಎನ್. ಸೋಮಣ್ಣ ಕಾಂಪ್ಲೆಕ್ಸ್,
ವೈ.ರಾಮಚಂದ್ರು ರೋಡ್,
ಗಾಂಧಿನಗರ, ಬೆಂಗಳೂರು.
ಹಾಲಿ ವಿಳಾಸಃ ಹೆಬ್ಬಳ್ಳಿ ಅಂಚೆ,
ಹೊಸದುರ್ಗ ತಾಲ್ಲೂಕು, ಚಿತ್ರುದುರ್ಗ ಜಿಲ್ಲೆ.

**(ಅರ್ಜಿದಾರ ಸ್ವಯಂ )**

**ವಿರುದ್ಧ**

ಎದುರುದಾರ / ವಾದಿ -

ಹೆಚ್.ಎನ್. ಶಿವಮೂರ್ತಿ ತಂದೆ ಲೇಟ್ ನಂಜುಂಡಪ್ಪ,
ವಯಸ್ಸು ಸುಮಾರು 40 ವರ್ಷ,
ವಾಸಃ ಹೆಬ್ಬಳ್ಳಿ ,
ಹೊಸದುರ್ಗ ತಾಲ್ಲೂಕು.

(ಎದುರುದಾರನ ಪರ ವಕೀಲರು - ಶ್ರೀ ಬಿ.ಎಸ್. ಚಂದ್ರುಶೇಖರಮೂರ್ತಿ )

**ಮಧ್ಯಂತರ ಅರ್ಜಿ ಸಂಖ್ಯೆ 8 ರ ಮೇಲೆ ಆದೇಶ**

ಅರ್ಜಿದಾರ /ಉದ್ದೇಶಿತ 2 ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿ ಸಂಖ್ಯೆ 8 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10 (2) ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ತನ್ನು ಈ ದಾವೆಯಲ್ಲಿ 2 ನೇ ಪ್ರತಿವಾದಿಯಾಗಿ ಸೇರ್ಪಡೆಗೊಳ್ಳಲು ಅನುಮತಿಸಬೇಕೆಂದು ಕೋರಿರುತ್ತಾನೆ.

**2.** ಈ ಮಧ್ಯಂತರ ಅರ್ಜಿಯನ್ನು ಅರ್ಜಿದಾರ/ ಉದ್ದೇಶಿತ 2 ನೇ ಪ್ರತಿವಾದಿ ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣವನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

**3.** ಎದುರುದಾರ/ವಾದಿಯು ಈ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

**4.** ಅರ್ಜಿದಾರನ ಪರ ಮತ್ತು ಎದುರುದಾರನ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ:-

ಅಂಶ-1 ಅರ್ಜಿದಾರ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ, ಈ ದಾವೆಯಲ್ಲಿ ಒಳಗೊಂಡ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಹಾಗೂ ಸಂಪೂರ್ಣವಾಗಿ ನ್ಯಾಯ ನಿರ್ಣಯಿಸಲು ಮತ್ತು ಇತ್ಯರ್ಥಗೊಳಿಸಲು ತಾನು ಅವಶ್ಯಕ ಪಕ್ಷಗಾರ ಎನ್ನುವುದನ್ನು ತೋರಿಸಿದ್ದಾನೆಯೇ?

ಅಂಶ-2 ಯಾವ ಆದೇಶ?

**6.** ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ:-

ಅಂಶ-1 - ನಕಾರಾತ್ಮಕ

ಅಂಶ-2 - ಅಂತಿಮ ಆದೇಶದಂತೆ:

**ಕಾರಣಗಳು**

**7.** **ಅಂಶ-1 -** ವಾದಿ ತನ್ನ ವಾದ ಪತ್ರದಲ್ಲಿ, ವಾದಿ ಮತ್ತು ಪ್ರತಿವಾದಿ ಸಹೋದರರು ಇದ್ದು, ವಾದಿ ಮತ್ತು ಪ್ರತಿವಾದಿ ತಮ್ಮ ಜಂಟಿ ಕುಟುಂಬದ ಆಸ್ತಿಗಳನ್ನು, ಹೊಸದುರ್ಗದ ಮುನ್ಸಿಫ್ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದ್ದ ಕಾರಣ, ದಾವಾ ಆಸ್ತಿಯನ್ನು ಬಿಟ್ಟು, ದಿನಾಂಕ:22-12-1979 ರಂದು ಪಾಲುವಿಭಾಗ ಮಾಡಿಕೊಂಡಿದ್ದು, ಸದರಿ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯ ಪರ ಇತ್ಯರ್ಥವಾಗಿದ್ದರಿಂದ ಪುನಃ ದಿನಾಂಕ: 16-04-1993 ರಂದು ಪಾಲುವಿಭಾಗವನ್ನು ಮಾಡಿಕೊಂಡಿರುತ್ತಾರೆ. ಸದರಿ ಪಾಲುವಿಭಾಗದಲ್ಲಿ ಪ್ರತಿವಾದಿಯು 50,000/- ರೂಗಳನ್ನು ವಾದಿಯಿಂದ ಪಡೆದು, ದಾವಾ ಆಸ್ತಿಯಲ್ಲಿರುವ ತನ್ನ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾನೆ.ಸದರಿ ಪಾಲುವಿಭಾಗವಾದ ನಂತರ ವಾದಿ ಸುಮಾರು 50,000/- ರೂಗಳಿಗಿಂತಲೂ ಹೆಚ್ಚಿನ ಹಣ ಖರ್ಚು ಮಾಡಿ ದಾವಾ ಆಸ್ತಿಯನ್ನು ಅಭಿವೃದ್ಧಿ ಮಾಡಿರುತ್ತಾನೆ ಮತ್ತು ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇದ್ದು, ಪಹಣಿ ಪತ್ರಿಕೆಯು ವಾದಿಯ ಹೆಸರಿನಲ್ಲಿ ಇರುತ್ತದೆ. ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲದೆ ಇದ್ದರೂ ಸಹ, ದಾವಾ ಆಸ್ತಿಯಲ್ಲಿ ವಾದಿಯ ಸ್ವಾಧೀನಾನುಭವಕ್ಕೆ ಹಸ್ತಕ್ಷೇಪ ಮಾಡಲು ಪ್ರಯತ್ನಿಸುತ್ತಾ, ತೆಂಗಿನ ಕಾಯಿಗಳನ್ನು ಕೀಳಲು ಪ್ರಯತ್ನಿಸಿರುತ್ತಾನೆ. ಅಲ್ಲದೆ, ದಾವಾ ಆಸ್ತಿಯಲ್ಲಿ ವಾದಿಯ ಮಾಲಿಕತ್ವವನ್ನು ಪ್ರತಿವಾದಿ ನಿರಾಕರಿಸಿರುತ್ತಾನೆ ಎಂದು ಆರೋಪಿಸಿ, ದಾವಾ ಆಸ್ತಿಗೆ ತನ್ನನ್ನು ಮಾಲಕ

ಹಾಗೂ ಸ್ವಾಧೀನದಾರನೆಂದು ಘೋಷಿಸಬೇಕೆಂದು ಮತ್ತು ತನ್ನ ಸ್ವಾಧೀನಾನುಭವಕ್ಕೆ ಹಸ್ತಕ್ಷೇಪ ಮಾಡದಂತೆ ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆಯನ್ನು ನೀಡಬೇಕೆಂಬ ಪರಿಹಾರವನ್ನು ಕೋರಿರುತ್ತಾನೆ. ಆದರೆ, ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಯನ್ನು ತಾನು ಮತ್ತು ವಾದಿ ಜಂಟಿ ಸ್ವಾಧೀನಾನುಭವದಲ್ಲಿ ಇದ್ದು, ತಾನು ಹಿಸ್ಸಾದಾರನೆಂದು ಆರೋಪಿಸಿರುತ್ತಾನೆ. ಅಲ್ಲದೆ, ಪಕ್ಷಗಾರರ ಸಹೋದರಿಯರಾದ ಗಂಗಮ್ಮ, ಸರೋಜಮ್ಮ, ಸುಲೋಚನಮ್ಮ ಮತ್ತು ಯಶೋದಮ್ಮ ಇವರ ಸೇರ್ಪಡೆಯಾಗದೆ ದಾವೆ ಊರ್ಜಿತವಾಗಿರುವುದಿಲ್ಲವೆಂದು ಆರೋಪಿಸಿದ್ದು, ಈಗ ಅರ್ಜಿದಾರ/ ಉದ್ದೇಶಿತ 2ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ತಾನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರನಾಗಿದ್ದರಿಂದ, ತನ್ನನ್ನು ಈ ದಾವೆಯಲ್ಲಿ 2ನೇ ಪ್ರತಿವಾದಿಯಾಗಿ ಸೇರ್ಪಡೆಗೊಳಿಸಲು ಅನುಮತಿಸಬೇಕೆಂದು ಕೋರಿರುತ್ತಾನೆ.

**8.** ಅರ್ಜಿದಾರ/ಉದ್ದೇಶಿತ 2ನೇ ಪ್ರತಿವಾದಿಯು ತಮ್ಮ ವಾದವನ್ನು ಮಂಡಿಸುತ್ತಾ, ಕುಟುಂಬದ ಮೂಲ ಕರ್ತನಾದ ದೊಡ್ಡಪ್ಪ ಇವನಿಗೆ ಹೆಚ್.ಡಿ.ನಂಜುಂಡಪ್ಪ, ಹೆಚ್.ಡಿ. ಕಾಳಪ್ಪ, ಹೆಚ್.ಡಿ.ರುದ್ರಪ್ಪ, ಹೆಚ್.ಡಿ. ಈಶ್ವರಪ್ಪ ಮತ್ತು ಹೆಚ್.ಡಿ.ಮಹೇಶ್ವರಪ್ಪ ಎಂಬ ಮಕ್ಕಳು ಇದ್ದು, ಉದ್ದೇಶಿತ 2ನೇ ಪ್ರತಿವಾದಿಯ ತಂದೆ ಮತ್ತು ಅವನ ಸಹೋದರರು ಜಂಟಿ ಕುಟುಂಬದ ಆಸ್ತಿಗಳಲ್ಲಿ ಹಿಸ್ಸಾದಾರರಾಗಿರುತ್ತಾರೆ ಮತ್ತು ಕುಟುಂಬದ ಎಲ್ಲಾ ಸದಸ್ಯರು ದಾವಾ ಆಸ್ತಿಯನ್ನು ಸೇರಿಸಿ ಜಂಟಿ ಕುಟುಂಬದ ಆಸ್ತಿಗಳನ್ನು 1993 ರಲ್ಲಿ ಮೌಖಿಕ ಪಾಲುವಿಭಾಗ ಮಾಡಿಕೊಂಡಿರುತ್ತಾರೆ. ವಾದಿ ಮತ್ತು ಪ್ರತಿವಾದಿ ಸೇರಿ ಉದ್ದೇಶಿ 2ನೇ ಪ್ರತಿವಾದಿಯ ತಂದೆಯ ಕುಟುಂಬದ ವಿರುದ್ಧ ಮೂಲ ದಾವೆ ನಂ-70/1977 ನ್ನು ಸಲ್ಲಿಸಿದ್ದು ಅದು ಡಿಕ್ರಿಯಾಗಿದ್ದು, ನಂತರ ಉದ್ದೇಶಿತ 2ನೇ ಪ್ರತಿವಾದಿಯ ತಂದೆಯ ಕುಟುಂಬದವರು

ಆರ್.ಎ ನಂ-17/1983 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ ರಾಜಿಯಾಗಿದ್ದು, 1 ನೇ ಪ್ರತಿವಾದಿ ರಾಜಿ ಅರ್ಜಿಯನ್ನು ಸಲ್ಲಿಸಿ ರಾಜಿಯಾಗಿದ್ದು, ಅದಾದನಂತರ 1 ನೇ ಪ್ರತಿವಾದಿಯು ಮತ್ತು ಉದ್ದೇಶಿತ 2 ನೇ ಪ್ರತಿವಾದಿಯ ತಂದೆಯು ಸೇರಿ ತಹಶೀಲ್ದಾರರ ಮುಂದೆ ಖಾತೆಯ ಸಲುವಾಗಿ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಅದರಂತೆ ಉದ್ದೇಶಿತ 2 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಖಾತೆಯು ವರ್ಗಾವಣೆಯಾಗಿರುತ್ತದೆ. ಉದ್ದೇಶಿತ 2 ನೇ ಪ್ರತಿವಾದಿಯ ತಂದೆಗೆ ಸರ್ವೇ ನಂ-127 ರಲ್ಲಿ 3 ಎಕರೆ 10 ಗುಂಟೆಯು ಹಿಸ್ಸೆಗೆ ಬಂದಿದ್ದು, ಆದರೆ ವಾದಿಯು ದಾವೆಯನ್ನು ಸಲ್ಲಿಸುವಾಗ, ಉದ್ದೇಶಿತ 2 ನೇ ಪ್ರತಿವಾದಿಯ ತಂದೆಯನ್ನು ಪಕ್ಷಗಾರನನ್ನಾಗಿ ಮಾಡಿರಲಿಲ್ಲ. ಆದ್ದರಿಂದ, ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರನಾಗಿರುವುದರಿಂದ, ತನ್ನನ್ನು ಈ ದಾವೆಯಲ್ಲಿ 2 ನೇ ಪ್ರತಿವಾದಿಯಾಗಿ ಸೇರ್ಪಡೆಗೊಳಿಸಲು ಅನುಮತಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**9.** ಎದುರುದಾರ/ವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಿನಾಂಕಃ 16-04-1993 ರಲ್ಲಿ ವಾದಿ ಮತ್ತು ಪ್ರತಿವಾದಿ ಮಾಡಿಕೊಂಡ ಪಾಲುವಿಭಾಗದಲ್ಲಿ ಪ್ರತಿವಾದಿಯು 50,000/- ರೂಗಳನ್ನು ವಾದಿಯಿಂದ ಪಡೆದು, ದಾವಾ ಆಸ್ತಿಯಲ್ಲಿರುವ ತನ್ನ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾನೆ. ಆದ್ದರಿಂದ, ವಾದಿ ದಾವಾ ಆಸ್ತಿಗೆ ಮಾಲಕ ಹಾಗೂ ಸ್ವಾಧೀನಾನುಭವದಾರನಾಗಿರುತ್ತಾನೆ. ಅಲ್ಲದೆ, ಉದ್ದೇಶಿತ 2 ನೇ ಪ್ರತಿವಾದಿ ಅಥವಾ ಅವನ ಪೂರ್ವಜರು ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ, ಮಾಲಿಕತ್ವ ಮತ್ತು ಹಿಸ್ಸೆಯನ್ನು ಹೊಂದಿಲ್ಲ. ಸದರಿ ವಿಷಯ ಉದ್ದೇಶಿತ 2 ನೇ ಪ್ರತಿವಾದಿಗೆ ಗೊತ್ತಿದ್ದರೂ ಸಹ, ನಿಜ ಸಂಗತಿಗಳನ್ನು ಮರೆ-ಮಾಚಿ ವಾದಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು, ಅಲ್ಲದೆ, ಉದ್ದೇಶಿತ 2 ನೇ ಪ್ರತಿವಾದಿಯು ಈ ದಾವೆಯಲ್ಲಿ ಅವಶ್ಯಕ

ಪಕ್ಷಗಾರನು ಅಲ್ಲ. ಕಾರಣ, ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**10**. ವಾದಿಯ ವಾದಪತ್ರ ಮತ್ತು ಪ್ರತಿವಾದಿಯ ಲಿಖಿತ ಹೇಳಿಯನ್ನು ಕುಲಂಕುಷವಾಗಿ ಅವಲೋಕಿಸಲಾಗಿ, ದಾವಾ ಆಸ್ತಿ ದಿನಾಂಕ:16-04-1993 ರಲ್ಲಿ ಆದ ಪಾಲುವಿಭಾಗದ ಮೂಲಕ ವಾದಿಯ ಹಿಸ್ಸೆಗೆ ಬಂದಿದೆ ಅಥವಾ ಇಲ್ಲ ಮತ್ತು ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿ ಜಂಟಿ ಸ್ವಾಧೀನಾನುಭವ ಹೊಂದಿದ್ದಾರೆ ಅಥವಾ ಇಲ್ಲ ಮತ್ತು ದಾವಾ ಆಸ್ತಿಯಲ್ಲಿ ಪ್ರತಿವಾದಿಗೆ ಅರ್ಧ ಹಿಸ್ಸೆಯ ಹಕ್ಕು ಇದೆ ಅಥವಾ ಇಲ್ಲ ಎನ್ನುವುದು ಉಭಯಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಪ್ರಶ್ನೆಗಳಾಗಿರುತ್ತವೆ. ಅಲ್ಲದೆ, ಈಗ ಅರ್ಜಿದಾರ/ಉದ್ದೇಶಿತ 2 ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿರುವ ತನ್ನ ಪ್ರಮಾಣಪತ್ರದಲ್ಲಿ ಮೌಖಿಕ ಪಾಲುವಿಭಾಗದಲ್ಲಿ ತನ್ನ ತಂದೆಯ ಕುಟುಂಬಕ್ಕೆ ಬಂದ ಹಿಸ್ಸೆಯ ಆಸ್ತಿಗಳು ಹೆಬ್ಬಳ್ಳಿ ಗ್ರಾಮದ ಸರ್ವೇ ನಂ-69/4 ರಲ್ಲ್ 1 ಎಕರೆ 03 ಗುಂಟೆ, ಸರ್ವೇ ನಂ-7 ರಲ್ಲಿ 2 ಎಕರೆ 30 ಗುಂಟೆ, ಸರ್ವೆ ನಂ-11 ರಲ್ಲಿ 30 ಗುಂಟೆ ಮತ್ತು ಬೀಸನಹಳ್ಳಿ ಗ್ರಾಮದ ಸರ್ವೇ ನಂ- 12 ರಲ್ಲಿ 3 ಎಕರೆ, ಸರ್ವೇ ನಂ-14 ರಲ್ಲಿ 2 ಎಕರೆ 30 ಗುಂಟೆ ಮತ್ತು ಹೆಬ್ಬಳ್ಳಿಯ ದಾವಾ ಆಸ್ತಿ ಸರ್ವೇ ನಂ-127 ರಲ್ಲಿ 3 ಎಕರೆ 10 ಗುಂಟೆ ಎಂದು ಹೇಳಿರುತ್ತಾನೆ. ಆದರೆ, ತನ್ನ ತಂದೆಗೆ ಹೆಬ್ಬಳ್ಳಿ ಗ್ರಾಮದ ಸರ್ವೇ ನಂ-127 ರಲ್ಲಿ ಬಂದ 3 ಎಕರೆ 10 ಗುಂಟೆಯ ಚೆಕ್ಕುಬಂದಿ ಯಾವುದು ಎಂದು ಹೇಳಿಲ್ಲ. ಅಲ್ಲದೆ, ಸದರಿ 3 ಎಕರೆ 10 ಗುಂಟೆಯು ದಾವಾ ಆಸ್ತಿಯ ವಿಸ್ತೀರ್ಣದಲ್ಲಿಯೇ ಬರುತ್ತದೆ ಎಂದು ನಿರ್ಧಿಷ್ಟವಾಗಿ ಹೇಳಿಲ್ಲ. ಅಲ್ಲದೆ ತನ್ನ ತಂದೆಗೆ ಎಷ್ಟು ಜನ ಮಕ್ಕಳು ಮತ್ತು ಅವರ ಹೆಸರು ಏನು ಮತ್ತು ಅವರು ಜೀವಂತ ಇರುವರೋ ಅಥವಾ ಇಲ್ಲ ಎನ್ನುವುದನ್ನು ಹೇಳಿಲ್ಲ. ಅಲ್ಲದೆ, ಉದ್ದೇಶಿತ 2 ನೇ ಪ್ರತಿವಾದಿಯ ತಂದೆಯಾದ ಡಿ. ಮಹೇಶ್ವರಪ್ಪ

ಇವನ ಎಲ್ಲಾ ಮಕ್ಕಳು ಅಥವಾ ಎಲ್ಲಾ ವಾರಸುದಾರರು ಸೇರಿ ಈ ಅರ್ಜಿಯನ್ನು ಸಲ್ಲಿಸಿಲ್ಲ. ಅಲ್ಲದೆ, ಈ ಉದ್ದೇಶಿತ 2 ನೇ ಪ್ರತಿವಾದಿಯು ತಾನೊಬ್ಬನೇ ತನ್ನ ತಂದೆಯಾದ ಡಿ. ಮಹೇಶ್ವರಪ್ಪನ ವಾರಸುದಾರನೆಂದು ಹೇಳಿಲ್ಲ.ಆದ್ದರಿಂದ, ಡಿ. ಮಹೇಶ್ವರಪ್ಪನ ಎಲ್ಲಾ ವಾರಸುದಾರರು ಸೇರಿ ತಾವು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರು ಎಂದು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿಲ್ಲ.

**11**. ಉದ್ದೇಶಿತ 2 ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿದ ತನ್ನ ಪ್ರಮಾಣಪತ್ರದಲ್ಲಿ ಮೂಲ ಕರ್ತನಾದ ದೊಡ್ಡಪ್ಪ ಇವನಿಗೆ ಹೆಚ್.ಡಿ. ನಂಜುಂಡಪ್ಪ, ಹೆಚ್.ಡಿ ಕಾಳಪ್ಪ, ಹೆಚ್.ಡಿ ರುದ್ರಪ್ಪ, ಹೆಚ್.ಡಿ.ಈಶ್ವರಪ್ಪ ಮತ್ತು ಡಿ. ಮಹೇಶ್ವರಪ್ಪ ಎಂಬ ಮಕ್ಕಳು ಇರುವುದಾಗಿ ಹೇಳಿರುವುದರಿಂದ, ಈ ದಾವೆಯ ವಾದಿ ಮತ್ತು ಪ್ರತಿವಾದಿಯು ಹೆಚ್.ಡಿ. ನಂಜುಂಡಪ್ಪನ ಮಕ್ಕಳು ಇದ್ದು, ಅವರು ತಮ್ಮ ಕುಟುಂಬದ ಆಸ್ತಿ ದಾವಾ ಆಸ್ತಿ ಇದ್ದು, ಅದನ್ನು ತಾವಿಬ್ಬರೂ ದಿನಾಂಕಃ 16-04-1993 ರಲ್ಲಿ ಪಾಲುವಿಭಾಗ ಮಾಡಿಕೊಂಡಿರುವುದಾಗಿ ವಾದಿ ತನ್ನ ವಾದಪತ್ರದಲ್ಲಿ ಹೇಳಿರುವ ಕಾರಣ, ವಾದಿ ಮತ್ತು ಪ್ರತಿವಾದಿಯ ಮಧ್ಯೆ ವಿವಾದಲ್ಲಿರುವ ದಾವಾ ಆಸ್ತಿಯು ವಾದಿಯ ಮತ್ತು ಪ್ರತಿವಾದಿಯ ತಂದೆಯ ನಂತರ ವಾದಿ ಮತ್ತು ಪ್ರತಿವಾದಿಗೆ ಬಂದಂತಹ ಆಸ್ತಿ ಎಂದು ವಾದಪತ್ರ ಮತ್ತು ಪ್ರತಿವಾದಿಯ ಲಿಖಿತ ಹೇಳಿಕೆಯ ಮೂಲಕ ಕಂಡುಬರುತ್ತದೆ ವಿನಃ ಉದ್ದೇಶಿತ 2 ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಯಲ್ಲಿ ಆರೋಪಿಸಿದಂತೆ ಮೂಲ ಕರ್ತನಾದ ದೊಡ್ಡಪ್ಪ ಇವನ ಆಸ್ತಿಯಾಗಿದ್ದು, ಅದರಲ್ಲಿ ಪಾಲುವಿಭಾಗವಾಗಿಲ್ಲವೆಂದು ವಾದಪತ್ರ ಮತ್ತು ಲಿಖಿತ ಹೇಳಿಕೆಯ ಮೂಲಕ ಕಂಡುಬರುವುದಿಲ್ಲ. ಆದ್ದರಿಂದ, ವಾದಿ ಮತ್ತು ಪ್ರತಿವಾದಿಯ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ಈ ನ್ಯಾಯಾಲಯ ಪರಿಣಾಮಕಾರಿಯಾಗಿ ಮತ್ತು ಅಂತಿಮವಾಗಿ ನ್ಯಾಯ ನಿರ್ಣಯಿಸಲು ಈ ಉದ್ದೇಶಿತ 2 ನೇ ಪ್ರತಿವಾದಿಯು

ಅವಶ್ಯಕ ಪಕ್ಷಗಾರನಾಗಿರುವುದಿಲ್ಲ. ಅಲ್ಲದೇ, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2)ರ ಅಡಿಯಲ್ಲಿ, ನ್ಯಾಯಾಲಯವು ದಾವೆಯಲ್ಲಿ ಒಳಗೊಂಡ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಮತ್ತು ಸಂಪೂರ್ಣವಾಗಿ ನ್ಯಾಯ ನಿರ್ಣಯಿಸಲು ಮತ್ತು ಇತ್ಯರ್ಥಗೊಳಿಸುವ ಸಲುವಾಗಿ ವ್ಯವಹರಣೆಯ ಯಾವುದೇ ಹಂತದಲ್ಲಿ ಅವಶ್ಯಕವಾದಂತಹ ಯಾವುದೇ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಸೇರ್ಪಡೆಗೊಳಿಸಲು ಆದೇಶಿಸಬಹುದಾಗಿದ್ದು, ಆದರೆ ಅರ್ಜಿದಾರ/ಉದ್ದೇಶಿತ 2 ನೇ ಪ್ರತಿವಾದಿಯು ಡಿ. ಮಹೇಶ್ವರಪ್ಪನ ಮಗನಿದ್ದು, ಉಳಿದ ಮಕ್ಕಳ ಅಥವಾ ವಾರಸುದಾರರ ಬಗ್ಗೆ ಏನನ್ನು ಹೇಳದೇ ತಾನೊಬ್ಬನೇ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಾರಣ, ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ, ಈ ದಾವೆಯಲ್ಲಿ ಒಳಗೊಂಡ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಹಾಗೂ ಸಂಪೂರ್ಣವಾಗಿ ನ್ಯಾಯ ನಿರ್ಣಯಿಸಲು ತನ್ನ ಹಾಜರಾತಿ ಅವಶ್ಯವಿದ್ದು, ತಾನು ಅವಶ್ಯಕ ಪಕ್ಷಗಾರ ಎನ್ನುವುದನ್ನು ಹಾಗೂ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು ಅರ್ಜಿದಾರ, ಉದ್ದೇಶಿತ 2 ನೇ ಪ್ರತಿವಾದಿಯು ತೋರಿಸಿರುವುದಿಲ್ಲ. ಆದ್ದರಿಂದ, **ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**12. ಅಂಶ-2** – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ಈ ಕೆಳಕಂಡಂತೆ ಮಾಡಿದಃ

**ಆದೇಶ**

ಅರ್ಜಿದಾರ/ ಉದ್ದೇಶಿತ 2 ನೇ ಪ್ರತಿವಾದಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ, ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ನ್ನು 100 ರೂಗಳ ಖರ್ಚಿನ ಮೇಲೆ ವಜಾಗೊಳಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು ದಿನಾಂಕ **18ನೇ ಜೂನ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-
**(ವೈ. ಕೆ. ಬೇನಾಳ),**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹೊಸದುರ್ಗ.**